ಕರ್ನಾಟಕ ವಿಧಾನಸಭೆ

ದಿನಾಂಕ 23ನೇ ಗುರುವಾರ ಫೆಬ್ರವರಿ 1984

ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ 9 ಗಂಟೆಗೆ ಸಮಾವೇಶಗೊಂಡಿತು.

ಮಾನ್ಯ ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ ಪೀಠವನ್ನಲಂಕರಿಸಿದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ರಾಜ್ಯ ಕೈಮಗ್ಗ ಅಭಿವೃದ್ಧಿ ಯೋಜನೆಯ ಕೇಂದ್ರಗಳಲ್ಲಿ ದುಡಿಯುತ್ತಿರುವ ನೇಕಾರರಿಗೆ ಮಜೂರಿ ಕುರಿತು.

299 (18) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).--ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರಾಜ್ಯ ಕೈಮಗ್ಗ ಅಭಿವೃದ್ಧಿ ಯೋಜನೆಯ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ನೇಕಾರರಿಗೆ ಮಜೂರಿ ಕಡಿಮೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ನೇಕಾರರ ಹಿತದೃಷ್ಟಿಯಿಂದ ಮಜೂರಿಯನ್ನು ಹೆಚ್ಚಿಸುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).--

ಅ) ಬಂದಿದೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಆಶ್ರಯದಲ್ಲಿ ನೇಯುತ್ತಿರುವ ಕೈಮಗ್ಗ ನೇಕಾರರಿಗೆ ಮಜೂರಿಯನ್ನು ಅಗಿಂದಾಗೆ ಅವರ ಜೀವನ ಮಟ್ಟವನ್ನು ಪರಿಗಣಿಸಿ, ಹಾಗೂ ಇತರ ಸಹಕಾರ ಸಂಘಗಳು ನೀಡುತ್ತಿರುವ ಮಜೂರಿಗೆ ಸಮನಾಗಿರುವುದಲ್ಲದೆ ಸಾಹುಕಾರ ನೇಕಾರರು ನೀಡುತ್ತಿರುವ ಮಜೂರಿಗಿಂತಲೂ ಹೆಚ್ಚಾಗಿ ಕೊಡಲಾಗುತ್ತಿದೆ.

ಆ) ಸದ್ಯಕ್ಕೆ ಮಜೂರಿಯನ್ನು ಹೆಚ್ಚಿಸುವ ಪ್ರಸ್ತಾವನೆಯು ಇರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಅಧ್ಯಕ್ಷರೇ, ಸಾಹುಕಾರ ನೇಕಾರರು ನೌಕರರಿಗೆ ನೀಡುತ್ತಿರುವ ಮಜೂರಿಗಿಂತಲೂ ಹೆಚ್ಚು ಮಜೂರಿಯನ್ನು ಇವರಿಗೆ ಕೊಡಲಾಗುತ್ತಿದೆ ಎಂದು ಹೇಳಿದ್ದೀರಿ. ಸಾಹುಕಾರ ನೇಕಾರರು ನೀಡುತ್ತಿರುವ ಮಜೂರಿ ಪೀಸ್ ರೇಟ್‌ಗೆ ಎಷ್ಟು ? ನೀವು ಕೊಡುತ್ತಿರುವುದು ಎಷ್ಟು ? ಇವತ್ತಿನ ದಿವಸ ಕೈಮಗ್ಗ ಅಭಿವೃದ್ಧಿ ನಿಗಮದ ಆಶ್ರಯದಲ್ಲಿ ನೇಯುತ್ತಿರುವ ನೇಕಾರರಿಗೆ ಜೀವನ ಮಟ್ಟವನ್ನು ಅನುಸರಿಸಿ ಹೆಚ್ಚು ಮಜೂರಿ ಕೊಡುತ್ತೇನೆಂದು ಹೇಳಿದ್ದು ನಿಜವೇ ? ಇವತ್ತಿನ ದಿವಸ ಬೆಲೆ ಏರಿಕೆ ಬಗ್ಗೆ ಶ್ವೇತಪತ್ರ ಹೊರಡಿಸಿದ್ದೀರಿ ಇವತ್ತಿನ ದಿನಸಿ ಬೆಲೆಗಳು ಗಗನಕ್ಕೆ ಏರುತ್ತಿರುವ ಸಂದರ್ಭದಲ್ಲಿ ಇವರಿಗೆ ಏಕೆ ಮಜೂರಿ ಹೆಚ್ಚು ಮಾಡಬಾರದು ?

ಶ್ರೀ ಎಸ್. ಆರ್. ಬೊಮ್ಮಾಯಿ.--ನೇಕಾರರಿಗೆ ಹೆಚ್ಚು ಮಜೂರಿ ಸಿಗಬೇಕೆನ್ನುವುದು ಸರ್ಕಾರದ ಇಚ್ಛೆ. ನಾವು ಮೇಲಿಂದ ಮೇಲೆ ನೇಕಾರರ ಜೊತೆ ಮತ್ತು ಬೇರೆಯವರ ಜೊತೆ ಸಮಾಲೋಚನೆ ಮಾಡಿ ಕಾಲಕಾಲಕ್ಕೆ ಮಜೂರಿ ಹೆಚ್ಚು ಮಾಡಿಕೊಂಡು ಬಂದಿದ್ದೇವೆ. ಈ ದಿನ ಕಾಟನ್ ಹ್ಯಾಂಡ್‌ಲೂಮ್‌ನಲ್ಲಿ 10 ರಿಂದ 15 ರೂಪಾಯಿ ವರೆಗೆ ಸಂಬಳ ಸಿಗುತ್ತಿದೆ. ಕೆಲವು ಕಡೆ 20 ರೂಪಾಯಿ ಸಿಗುತ್ತಿದೆ. ರೇಷ್ಮೆಯಲ್ಲಿ 20 ರಿಂದ 25 ರೂಪಾಯಿನವರೆಗೆ ಸಿಗುತ್ತಿದೆ. ಇದೂ ಅಲ್ಲದೇ ನೇಕಾರರಿಗೆ 100ಕ್ಕೆ 75 ರಷ್ಟು ಸಬ್ಸಿಡಿ ಸಾಲವನ್ನು ಸಹಾ ಕೊಡಲಾಗುತ್ತಿದೆ. ಹಾಗೂ ಅವರಿಗೆ ಕಚ್ಚಾ ಮಾಲನ್ನು ಒದಗಿಸಲಾಗುತ್ತಿದೆ. ಹಾಗೂ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡಲಾಗುತ್ತಿದೆ. ಈ ರೀತಿಯ ಎಲ್ಲಾ ಸೌಲಭ್ಯವನ್ನು ಒದಗಿಸಿದ್ದೇವೆ. ತಾವು ಇವರ ಬಗ್ಗೆ ಸಲಹೆ ಕೊಟ್ಟಿದ್ದೀರಿ ಆ ಬಗ್ಗೆ ಸರ್ಕಾರ ಸಾಧ್ಯವಾದಷ್ಟು ಮಟ್ಟಿಗೆ ಪರಿಶೀಲನೆ ಮಾಡುತ್ತದೆ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಇವತ್ತಿನ ದಿವಸ ನನ್ನ ಸಲಹೆಗೆ ಕಾಯಬೇಕಾಗಿಲ್ಲ. ಇವತ್ತಿನ ದಿವಸ ಬೆಲೆಗಳ ವಿಚಾರವಾಗಿ ಇವರು ಶ್ವೇತಪತ್ರವನ್ನೇ ಹೊರಡಿಸಿರುವಾಗ ಅದನ್ನೇ ಆಧಾರವಾಗಿ ಇಟ್ಟುಕೊಂಡು ಇವರ ಮಜೂರಿಯನ್ನು ಹೆಚ್ಚು ಮಾಡಬಹುದಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ಅವರಿಗೆ ಹೆಚ್ಚು ಮಜೂರಿ ಕೊಡುವುದು ಒಂದೇ ಪ್ರಶ್ನೆ ಅಲ್ಲ ಇವತ್ತು ಅವರು ಉತ್ಪಾದನೆ ಮಾಡಿದ್ದು ಮಾರಾಟವಾಗಬೇಕಾಗುತ್ತದೆ. ನಾವು ಈ ಮಾಲಿನ ಮಾರ್ಕೆಟ್ಟಿಂಗ್‌ನ್ನೂ ನೋಡಬೇಕಾಗುತ್ತದೆ. ಇದರ ಬೆಲೆ ಹೆಚ್ಚು ಆದರೆ ಅವು ಮಾರಾಟವಾಗುವುದಿಲ್ಲ, ಇದರಿಂದ ಮತ್ತೆ ಅವರು ತೊಂದರೆಗೆ ಈಡಾಗಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ತಾವು ಏನು 10 ರಿಂದ 25 ರೂಪಾಯಿ ವರೆಗೆ ಕೂಲಿ ಸಿಗುತ್ತಿದೆ ಎಂದು ಹೇಳುತ್ತಿದ್ದೀರಿ ಇದನ್ನು ಮೊಟರ್ ಲೆಕ್ಕದಲ್ಲಿ ಕೊಡಲಾಗುತ್ತಿದೆಯೋ ಅಥವಾ ದಿನಕೂಲಿ ಪ್ರಕಾರ ಕೊಡಲಾಗುತ್ತಿದೆಯೋ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊಟರ್ ಲೆಕ್ಕದಮೇಲೆ ಕೊಟ್ಟರೂ ಅವರಿಗೆ ಅವರೇಜ್ ಆಷ್ಟೇ ಸಂಬಳ ಸಿಗುತ್ತದೆ.

ಬೆಳಗಾಂ ಜಿಲ್ಲೆಯಲ್ಲಿ ಇದ್ದ ಎಂ. ಜಿ. ಫರ್ಟಿಲೈಸರ್ಸ್ ಉದ್ಯೋಗ ಸಮೂಹದ ಮಾಹಿತಿ ಬಗ್ಗೆ

ಪ್ರಸಂಖ್ಯೆ, 300 (III) ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಎಂ. ಜಿ. ಫರ್ಟಿಲೈಸರ್ಸ್ ಸಂಸ್ಥೆಗೆ ಸರ್ಕಾರದವರಿಂದ ಬುತಾರಾಮಹಟ್ಟಿಯ ಹತ್ತಿರ ಎಷ್ಟು ಎಕರೆ ಜಮೀನು ಕೊಡಲಾಗಿದೆ.

ಆ) ಆದಾಗಿದ್ದಲ್ಲಿ ಸದರಿ ಸಂಸ್ಥೆಯನ್ನು ಪ್ರಾರಂಭಿಸಲು ಬ್ಯಾಂಕಿನಿಂದ ಎಷ್ಟು ಹಣ ಕೊಡಲಾಗಿದೆ ಹಾಗೂ ಆ ಸಂಸ್ಥೆಯಲ್ಲಿ ಎಷ್ಟು ಟನ್ ಗೊಬ್ಬರವನ್ನು ತಯಾರು ಮಾಡಲಾಗುತ್ತಿದೆ ?

ಇ) ಈ ಸಂಸ್ಥೆಗೆ ಪ್ರತಿ ವರ್ಷ ಕೊಡುತ್ತಿರುವ ಯೂರಿಯಾ ಸುಪರ್ ಫಾಸ್‌ಫೇಟ್ ಹೂಗೂ ಇನ್ನಿತರ ಗೊಬ್ಬರದ ಪ್ರಮಾಣ ಎಷ್ಟು ;

ಈ) ಈ ಸಂಸ್ಥೆಯ ವ್ಯವಹಾರದಲ್ಲಿ ಸರ್ಕಾರದಿಂದ ತೊಡಗಿಸಿದ ಹಣದ ಮೊತ್ತವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು.— ಅ) ಇಲ್ಲ

ಆ) ಸದರಿ ಸಂಸ್ಥೆಗೆ ಸ್ಥಳೀಯ ಬ್ಯಾಂಕಿನಿಂದ ಹಣ ಕೊಟ್ಟಿಲ್ಲ. ಆದರೆ ಮಹಾರಾಷ್ಟ್ರದ ಕೊಲ್ಹಾಪುರದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರು ಈ ಸಂಸ್ಥೆಗೆ ಆರ್ಥಿಕ ಸಾಲವನ್ನು ಕೊಟ್ಟಿರುತ್ತಾರೆ. 1973-74ರ ಲಾಗಾಯ್ತು ಈ ಸಂಸ್ಥೆ ಗೊಬ್ಬರವನ್ನು ತಯಾರು ಮಾಡಿಲ್ಲ.

ಇ) ಈ ಸಂಸ್ಥೆಯನ್ನು 1973-74ನೇ ಸಾಲಿನಿಂದ ಮುಚ್ಚಲ್ಪಟ್ಟಿರುತ್ತೆ. ಆದುದರಿಂದ ಸರ್ಕಾರದಿಂದ ಯಾವ ರೀತಿಯ ಕಚ್ಚಾ ಸಾಮಾಗ್ರಿಗಳನ್ನು ಒದಗಿಸಿರುವುದಿಲ್ಲ.

ಈ) ರಾಜ್ಯ ಸರ್ಕಾರದಿಂದ ಈ ಸಂಸ್ಥೆಗೆ ಹಣ ಒದಗಿಸಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, 'ಆ' ಪ್ರಶ್ನೆಗೆ ಏನು ಉತ್ತರ ಕೊಟ್ಟಿದ್ದಾರೆ ಅದು ಸತ್ಯಕ್ಕೆ ದೂರವಾಗಿದೆ; ಆ ಒಂದು ಸಂಸ್ಥೆ ಇರತಕ್ಕಂತಹ ಜಾಗ ಸರ್ಕಾರದ ಜಮೀನು ಆಗಿರಬಹುದು ಆ ಬಗ್ಗೆ ತನಿಖೆ ಮಾಡಿ ನೋಡಬೇಕಾಗುತ್ತದೆ ಇವತ್ತಿನ ದಿವಸ ಜನಸಾಮಾನ್ಯರು ಜಮೀನನ್ನು ಕೇಳಿದರೆ ಕೊಡಲು ಹಿಂದೆ ಮುಂದೆ ನೋಡುತ್ತೀರಿ ಆದರೆ ಇಂತಹ ಜನ ಈ ರೀತಿ ಸಂಸ್ಥೆಗಳ ಮೂಲಕ ಇಷ್ಟು ಆಸ್ತಿ ಹೊಡೆದರೆ ಯಾರೂ ಸಹಿಸುವುದಕ್ಕೆ ಆಗುವುದಿಲ್ಲ ಮತ್ತು ಆ ಸಂಸ್ಥೆ ಮೇಲೆ ಅವರು ತೊಡಗಿಸಿರುವ ಹಣ ಎಷ್ಟು ? ಆ ಸಂಸ್ಥೆ ಮುಚ್ಚುವುದಕ್ಕಿಂತ ಮುಂಚೆ ಆ ಸಂಸ್ಥೆಗೆ ಕೊಟ್ಟ ಕಚ್ಚಾ ಸಾಮಗ್ರಿಗನ್ನೆಲ್ಲಾ ಅವರು ಕಾಳಸಂತೆಯಲ್ಲಿ ಮಾರಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಈ ಸಂಸ್ಥೆ ಈ ರೀತಿ ಮಾಡಿ ರೈತರಿಗೆ ಅನ್ಯಾಯ ಮಾಡಿರುವ ವಿಷಯ ಸರ್ಕಾರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಲ್ಲಿ ಅದರ ಅವ್ಯವಹಾರದ ಬಗ್ಗೆ ವಿವರ ಇದ್ದರೆ ಕೊಡಲಿ, ಆ ಬಗ್ಗೆ ನಾನು ವಿಚಾರ ಮಾಡಿಸುತ್ತೇನೆ. ಮಾನ್ಯ ಸದಸ್ಯರು 1973-74ನೇ ಸಾಲಿನಲ್ಲಿ ಅಲ್ಲಿ ಅವ್ಯವಹಾರ ಆಗಿದೆ ಎಂದು ಹೇಳುತ್ತಿದ್ದಾರೆ. ಅವರು ವಿವರ ಕೊಡಲಿ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾನ್ಯ ಮಂತ್ರಿಗಳು ಶಾಸಕರಿಗೇ ವಿವರ ಕೇಳುವುದಾದರೆ